ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1684
ಸದಸ್ಯರ ಹೆಸರು	:	ಶ್ರೀ ಆರ್. ಪ್ರಸನ್ನಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	23.03.2020
ಉತ್ತರಿಸುವ ಸಚಿವರು	:	ಮಾನ್ಯ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

ಪ್ರಶ್ನೆ	ಉತ್ತರ
ಅ) ರಾಜ್ಯದಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಇಲಾಖೆ ವ್ಯಾಪ್ತಿಗೆ ಬರುವ ಸಂಸ್ಥೆಗಳು/ ಕಾರ್ಖಾನೆ/ ಐಟಿ ಮತ್ತು ಬಿಟಿ ವಲಯಗಳಾವುವು; (ಜಿಲ್ಲಾವಾರು ವಿವರ ನೀಡುವುದು)	ರಾಜ್ಯದಾದ್ಯಂತ ಸುಮಾರು 5500 ಐಟಿ ಕಂಪನಿಗಳು ಮತ್ತು ಅಂದಾಜು 300 ಬಿಟಿ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. ಈ ಐಟಿ ಮತ್ತು ಬಿಟಿ ಕಂಪನಿಗಳು ಖಾಸಗಿಯಾಗಿರುವುದರಿಂದ ಇಲಾಖೆಯ ನಿಯಂತ್ರಣದಡಿ ಬರುವುದಿಲ್ಲ. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳು:- 1. ಕಿಯೋನಿಕ್ಸ್ (ಸಾರ್ವಜನಿಕ ನಿಗಮ) 2. ಕರ್ನಾಟಕ ನಾವಿನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ಇದಲ್ಲದೇ, ಇಲಾಖೆಯ ವತಿಯಿಂದ ಈ ಕೆಳಕಂಡ ಸಂಸ್ಥೆಗಳಿಗೆ ಸರ್ಕಾರದಿಂದ ಅನುದಾನವನ್ನು ಬಿಡುಗಡೆ ಮಾಡಲಾಗುತ್ತದೆ. 1. ಇನ್ಸ್ ಟಿಟ್ಯೂಟ್ ಆಫ್ ಬಯೋ ಇನ್ಫಾರ್ಮೇಟಿಕ್ಸ್ ಅಂಡ್ ಅಪ್ಲೈಡ್ ಬಯೋಟೆಕ್ನಾಲಜಿ (ಐಬಿಎಬಿ) 2. ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್ (ಬಿಬಿಸಿ) 3. ಐಐಐ-ಟಿ, ಬೆಂಗಳೂರು 4. ಐಐಐ-ಟಿ, ಧಾರವಾಡ 5. ಐಐಐ-ಟಿ ರಾಯಚೂರು 6. ಮಾನವ ತಳಿ ಶಾಸ್ತ್ರ ಕೇಂದ್ರ (ಸಿಹೆಚ್ ಜಿ) ಪ್ರಸ್ತುತ ಹುಬ್ಬಳ್ಳಿಯಲ್ಲಿ ಇಲಾಖೆಯ ಅಧೀನದಲ್ಲಿ ಒಂದು ಮಾಹಿತಿ ತಂತ್ರಜ್ಞಾನ ಪಾರ್ಕ್ ಇದ್ದು, ಸದರಿ ಪಾರ್ಕ್‌ನಲ್ಲಿ ಸುಮಾರು 57 ಐಟಿ/ ಐಟಿಇಎಸ್ ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ. • ಕಿಯೋನಿಕ್ಸ್ ಒಡೆತನದಲ್ಲಿ ಶಿವಮೊಗ್ಗದಲ್ಲಿ ಇರುವ ಐಟಿ ಪಾರ್ಕ್‌ನಲ್ಲಿ 12 ಐಟಿ/ಐಟಿಇಎಸ್ ಕಂಪನಿಗಳು • ಕಲಬುರ್ಗಿಯಲ್ಲಿ ಇರುವ ಐಟಿ ಪಾರ್ಕ್‌ನಲ್ಲಿ ಸುಮಾರು 9 ಐಟಿ/ ಐಟಿಇಎಸ್ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ರಾಜ್ಯದಲ್ಲಿರುವ ಐಟಿ/ಐಟಿಇಎಸ್, ಬಿಟಿ, ಇಎಸ್‌ಡಿಎಮ್, ಎವಿಜಿಸಿ, ಸ್ಟಾರ್ಟ್‌ಅಪ್ ಇತ್ಯಾದಿ ಕಂಪನಿಗಳು ಸರ್ಕಾರವು ಘೋಷಿಸಿರುವ ನೀತಿಯಲ್ಲಿರುವ ಉತ್ತೇಜನಗಳನ್ನು ಪಡೆಯುವ ಸಲುವಾಗಿ ಮಾತ್ರ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುತ್ತವೆ. ಇಲಾಖೆಯಲ್ಲಿ ಇಲ್ಲಿಯವರೆಗೆ 468 ಐಟಿ/ಐಟಿಇಎಸ್ ಕಂಪನಿಗಳು ಹಾಗೂ 24 ಐಟಿ/ಐಟಿಇಎಸ್ ಪಾರ್ಕ್ ಗಳು ಹಾಗೆಯೇ 55 ಬಿಟಿ ಕಂಪನಿಗಳು ನೋಂದಣಿಯಾಗಿರುತ್ತವೆ.

ಆ) ಈ ಸಂಸ್ಥೆಗಳಿಗೆ ಉದ್ಯೋಗಕ್ಕಾಗಿ ಸರ್ಕಾರದಿಂದ ವಿಧಿಸಲಾಗಿರುವ ನಿಯಮಗಳಾವುವು; ಹಾಗೂ ಸಂಸ್ಥೆಗಳು ಪಾಲಿಸಬೇಕಾದ ಮಾನದಂಡಗಳ ಸಂಪೂರ್ಣ ಮಾಹಿತಿ ನೀಡುವುದು?	ಸರ್ಕಾರವು ಪ್ರಕಟಿಸಿರುವ ವಿವಿಧ ನೀತಿಗಳ ಅಡಿಯಲ್ಲಿ ಐಟಿ, ಐಟಿಇಎಸ್, ನಾಲೆಡ್ಜ್, ಸ್ಟಾರ್ಟ್‌ಅಪ್, ಅನಿಮೇಷನ್, ಗೇಮಿಂಗ್, ಕಂಪ್ಯೂಟರ್ ಗ್ರಾಫಿಕ್ಸ್, ಟೆಲಿಕಾಂ, ಬಿಪಿಒ, ಕೆಪಿಒ ಇತರೆ ಜ್ಞಾನಾಧಾರಿತ ಕಂಪನಿಗಳಿಗೆ ಐದು ವರ್ಷಗಳ ಅವಧಿಗೆ ಕರ್ನಾಟಕ ಕೈಗಾರಿಕಾ ಉದ್ಯೋಗ (Standing orders) ನಿಯಮ-1946 ಅನ್ವಯವಾಗುವುದಿಲ್ಲ. ಇದಲ್ಲದೇ ಮಹಿಳಾ ನೌಕರರ ರಕ್ಷಣೆ ಮತ್ತು ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳವನ್ನು ತಡೆಗಟ್ಟಲು ಸೂಕ್ತ ಷರತ್ತುಗಳನ್ನು ವಿಧಿಸಲಾಗಿದೆ. ಜೊತೆಗೆ, ಇಲಾಖೆಯಲ್ಲಿ ನೋಂದಣಿಯಾದ ಐಟಿ/ಬಿಟಿ ಕಂಪನಿಗಳಿಗೆ ಸ್ಟಾಂಪ್ ಶುಲ್ಕದಲ್ಲಿ ಹಾಗೂ ವಿದ್ಯುಚ್ಛಕ್ತಿ ದರದಲ್ಲಿ ವಿನಾಯಿತಿ ನೀಡಲಾಗುತ್ತಿದೆ. ರಾಜ್ಯದಲ್ಲಿರುವ ಐಟಿ ಮತ್ತು ಬಿಟಿ ಕಂಪನಿಗಳಿಗೆ ಮಾಹಿತಿ ತಂತ್ರಜ್ಞಾನ ಜೈವಿಕ ತಂತ್ರಜ್ಞಾನ ಇಲಾಖೆಯಿಂದ ಪ್ರತ್ಯೇಕವಾಗಿ ಯಾವುದೇ ಮಾನದಂಡವನ್ನು ಅಥವಾ ನಿರ್ಬಂಧಗಳನ್ನು ವಿಧಿಸಿರುವುದಿಲ್ಲ. ಈ ಸಂಸ್ಥೆಗಳು ಆಯಾ ಸಂಸ್ಥೆಗಳಲ್ಲಿರುವ ಮಾನವ ಸಂಪನ್ಮೂಲ ನೇಮಕಾತಿ ನೀತಿಯನ್ವಯ ತಮ್ಮ ನೇಮಕಾತಿಗಳನ್ನು ಮಾಡಿಕೊಳ್ಳುತ್ತವೆ.

(ಡಾ. ಅಶ್ವಥ್ ನಾರಾಯಣ ಸಿ. ಎನ್)
ಉಪಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ,
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

ಸಂಖ್ಯೆ: ಐಟಿಬಿಟಿ 25 ಎಲ್ ಸಿಎಂ 2020